ಶ್ರೀಮಾತೆಯವರು ನನ್ನ ಮೇಲೆ ದಯೆ ತೋರಿ ಮಹಾಮಂತ್ರವನ್ನು ನೀಡಿದರು. ಒಂದು ರುದ್ರಾಕ್ಷಿ ಮಾಲೆಯನ್ನು ಕೊಟ್ಟರು. ಶ್ರೀಮಾತೆಯವರು ಅದರಲ್ಲಿ ಜಪ ಮಾಡಿ ನನಗೆ ಕೊಟ್ಟಿದ್ದರು. ಒಂದು ಸಲ ರೈಲುಗಾಡಿಯಲ್ಲಿ ಹೋಗುತ್ತಿದ್ದಾಗ ಆ ಜಪಮಾಲೆ ಕಳೆದುಹೋಗಿತ್ತು. ಅನಂತರ ಆಶ್ಚರ್ಯಕರವೆಂಬಂತೆ ಅದು ಹೇಗೋ ನನಗೆ ಸಿಕ್ಕಿಬಿಟ್ಟಿತ್ತು. ಈ ವಿಷಯ ಹಾಗಿರಲಿ.

೧೯೪೨ನೇ ಇಸವಿ. ನನಗೆ ತೀವ್ರ ಕಾಯಿಲೆ. ಗುರಪ್‌ನಲ್ಲಿದ್ದ ಹಳ್ಳಿಯ ಮನೆಗೆ ಹೋದೆ. ಮನೆಯಲ್ಲಿ ಎಲ್ಲರೂ ಅತ್ಯಂತ ಚಿಂತಾಕ್ರಾಂತರಾದರು. ಈಚೆಗೆ ಗುರಪ್‌ಗೆ ಒಬ್ಬರು ಒಳ್ಳೆಯ ಡಾಕ್ಟರ್ ಬಂದಿದ್ದರು. ಅವರೇ ನನಗೆ ಚಿಕಿತ್ಸೆ ಮಾಡುತ್ತಿದ್ದರು. ಆದರೆ ಏನು ಮಾಡಿದರೂ ನನಗೆ ವಾಸಿಯಾಗಲಿಲ್ಲ. ಕಾಯಿಲೆ ಕ್ರಮೇಣ ಹೆಚ್ಚಾಗತೊಡಗಿತು. ನನ್ನ ಸಂಬಂಧಿಕರೆಲ್ಲ ಇನ್ನಷ್ಟು ಚಿಂತಿಸತೊಡಗಿದರು. ಆದರೂ ಚಿಕಿತ್ಸೆಯಲ್ಲಿ ಯಾವುದಕ್ಕೂ ಕಡಿಮೆ ಮಾಡಲಿಲ್ಲ. ಬರಬರುತ್ತ ನನಗೆ ಉಸಿರಾಟ ಮಾಡುವುದೇ ಕಷ್ಟವಾಗತೊಡಗಿತು. ಡಾಕ್ಟರ್ ಹೇಳಿದರು: ಆಕ್ಸಿಜನ್ ಸಿಲಿಂಡರ್ ಬೇಕಾಗುತ್ತದೆ. ಮನೆಯಿಂದ ಯಾರೋ ವರ್ಧಮಾನಕ್ಕೆ ಹೋದರು — ಆಕ್ಸಿಜನ್ ಸಿಲಿಂಡರ್ ತರಲು. ಆ ರಾತ್ರಿ ನನಗೆ ಸ್ಪಷ್ಟವಾಗಿ ನೆನಪಿದೆ. ನನ್ನ ಸಂಕಟ ಇಮ್ಮಡಿಯಾಗಿತ್ತು. ಅದು ನನ್ನ ಕೊನೆಯ ರಾತ್ರಿಯೆಂದೇ ನಾನು ಭಾವಿಸಿದೆ. ಮನೆಯಲ್ಲಿ ಯಾರಿಗೂ ನಿದ್ದೆಯಿಲ್ಲ. ಇದ್ದಕ್ಕಿದ್ದಂತೆ ನನಗೆ ಶ್ರೀಮಾತೆಯವರ ಮಾತು ನೆನಪಾಯಿತು. ಶ್ರೀಮಾತೆಯವರಿಗೆ ಕಾಯಿಲೆಯಾಗಿದ್ದಾಗ ಸಾಕ್ಷಾತ್ ಕಾಳೀಮಾತೆಯೇ ಅವರ ಸೇವೆ ಮಾಡಿದ್ದರು. ನನ್ನ ಈ ಕಠಿಣ ಪರಿಸ್ಥಿತಿಯಲ್ಲಿ ಶ್ರೀಮಾತೆ ನನ್ನನ್ನು ಬದುಕಿಸಲಾರರೆ? ಮತ್ತೆ ಮತ್ತೆ ನಾನು ಅವರನ್ನೇ ನೆನಪಿಸಿಕೊಳ್ಳುತ್ತಿದ್ದೆ. ಅವರನ್ನೇ ಕರೆಯುತ್ತಿದ್ದೆ. ಕೈಕಾಲು ಅಲುಗಾಡಿಸುವುದಕ್ಕೂ ನನಗೆ ಶಕ್ತಿಯಿಲ್ಲ. ಸುಮ್ಮನೆ ಅಳುತ್ತಿದ್ದೆ. ಅಷ್ಟರಲ್ಲಿ ಒಂದು ಘಟನೆ ನಡೆಯಿತು. ಹಠಾತ್ತನೆ ಸ್ಪಷ್ಟವಾಗಿ ನೋಡಿದೆ, ಶ್ರೀಮಾತೆಯವರಂತೆಯೇ ಒಬ್ಬರು ನನ್ನ ತಲೆಯ ಬಳಿಗೆ ಬಂದು ನಿಂತುಬಿಟ್ಟರು. ಹೌದಲ್ಲ , ಶ್ರೀಮಾತೆಯೇ! ಅದೇ ಮುಖ, ಅದೇ ಕಣ್ಣುಗಳು, ಅದೇ ಕೆಂಪಂಚಿನ ಸೀರೆ! ಅವರ ಎರಡು ಕಣ್ಣುಗಳಿಂದಲೂ ಕರುಣೆ ಉಕ್ಕಿ ಹರಿಯುತ್ತಿದೆ. ವಾಸಿಯಾಗುತ್ತಿದೆ ಎಂದೆನಿಸಿತು ನನಗೆ. ನನಗೆ ಕೈಕಾಲು ಅಲುಗಾಡಿಸಲು ಸಾಧ್ಯವಾಯಿತು. ಮಾತನಾಡಲೂ ಸಾಧ್ಯವೆನಿಸಿತು. ಶ್ರೀಮಾತೆ ನನಗೆ ಬಿಳಿಬಣ್ಣದ ಒಂದು ಮಾತ್ರೆ ಹಾಗೂ ನಾಫ್ತಲಿನ್‌ನಂತಹ ಹಲವು ಗುಳಿಗೆಗಳನ್ನು ನುಂಗಲು ಕೊಟ್ಟರು. ಆ ಮಾತ್ರೆ ನನ್ನ ಗಂಟಲಲ್ಲಿ ಇಳಿಯುತ್ತಿದ್ದಂತೆ ನನಗನ್ನಿಸಿತು, ನನ್ನ ಎಲ್ಲ ಅನಾರೋಗ್ಯವನ್ನೂ ಅದು ಸೆಳೆದುಕೊಂಡು ನನ್ನ ದೇಹದಲ್ಲಿ ಕರಗಿಹೋಗುತ್ತಿದೆ — ಎಂಬಂತೆ. ಬಳಿಕ ನಾನು ನಿದ್ರೆಗೆ ಜಾರಿದೆ, ಏನೊಂದೂ ನೆನಪಿಲ್ಲ. ಬೆಳಗಿನ ಜಾವ ನಿದ್ದೆ ಬಿಟ್ಟಿತು. ನನ್ನ ದೇಹದಲ್ಲಿ ಏನೂ ಕಷ್ಟ, ಯಾತನೆಯಿಲ್ಲ, ಯಾವುದೇ ರೋಗಗಳಿಲ್ಲ ಎಂದು ನನಗನ್ನಿಸಿತು. ನಾನು ವಾಸಿಯಾದೆ, ಸಂಪೂರ್ಣವಾಗಿ ನನಗೆ ವಾಸಿಯಾಗಿದೆ. ಅನೇಕ ದಿನಗಳ ನಂತರ ನಾನು, ನಾನಾಗಿಯೇ ಹಾಸಿಗೆ ಬಿಟ್ಟೆದ್ದೆ. ಎಲ್ಲರಿಗೂ ಆಶ್ಚರ್ಯವಾಗುವಂತೆ ನಡೆದಾಡಿದೆ. ಬೆಳಗಿನ ಹೊತ್ತು ಡಾಕ್ಟರ್ ಬಂದರು. ನಾನು ಅವರಿಗೆ ಜೋರಾಗಿಯೇ ಹೇಳಿದೆ: ''ಡಾಕ್ಟ್ರೆ, ನನಗೆ ಗುಣವಾಯಿತು. ಈಗ ನನ್ನ ರೋಗ ವಾಸಿಯಾಯಿತು.'' ಡಾಕ್ಟರರು ಅವಾಕ್ಕಾದರು. ಅವರೆಂದರು, ''ದೇವರೇ ನಿಮ್ಮನ್ನು ಗುಣಮುಖ ಮಾಡಿದರು.'' ಆಕ್ಸಿಜನ್ ಸಿಲಿಂಡರನ್ನು ಹಿಂದಿರುಗಿಸಬೇಕಾಯಿತು. ಕ್ರಮೇಣ ನಾನು ಆರೋಗ್ಯಪೂರ್ಣನಾದೆ. ಆರೋಗ್ಯ ಹೊಂದಿದ್ದಲ್ಲ; ನನಗೆ ಎರಡನೇ ಜನ್ಮದೊರಕಿತು. ನನಗೆ ಬದುಕನ್ನು ನೀಡಿದವರೇ — ಶ್ರೀಮಾತೆ.

# ಶ್ರೀಮಾತೆಯವರ ಸ್ಮೃತಿಚಿತ್ರ

**ಶಿವರಾಣಿ ಸೇನ್**

ಈಗ ನನಗೆ ಎಂಬತ್ತೇಳು ವರ್ಷ ವಯಸ್ಸು (೧೯೮೨ರಲ್ಲಿ). ಇಂದಿಗೆ ಸುಮಾರು ೭೯-೮೦ ವರ್ಷಗಳ ಹಿಂದೆ(೧೯೦೨-೦೩), ನನಗೆ ಏಳು-ಎಂಟು ವರ್ಷ ವಯಸ್ಸಾಗಿದ್ದಾಗ ನಾನು ಶ್ರೀಮಾತೆಯವರನ್ನು ಮೊದಲ ಬಾರಿಗೆ ಭೇಟಿಯಾದೆ. ಬಾಗ್‌ಬಜಾರಿನಲ್ಲಿ ನನ್ನ ಮಾವನ ಮನೆಯಿತ್ತು. ನನ್ನ ಅತ್ತಿಗೆ ಆಗಾಗ ಬಾಗ್‌ಬಜಾರಿನಲ್ಲಿದ್ದ 'ಶ್ರೀಮಾತೆಯವರ ಮನೆ'ಗೆ ಹೋಗುತ್ತಿದ್ದರು — ಶ್ರೀಮಾತೆಯವರ ದರ್ಶನ ಪಡೆಯಲು. ನಾನು ಮಾವನ ಮನೆಗೆ ಹೋದಾಗಲೆಲ್ಲ ನನ್ನ ಅತ್ತಿಗೆಯೊಂದಿಗೆ 'ಶ್ರೀಮಾತೆಯವರ ಮನೆ'ಗೆ ಹೋಗುತ್ತಿದ್ದೆ. ಶ್ರೀಮಾತೆಯವರು ಬದುಕಿದ್ದವರೆಗೂ ನಾನು ನಡುನಡುವೆ ಬಾಗ್‌ಬಜಾರಿನಲ್ಲಿ ಅವರ ದರ್ಶನ ಮಾಡಿ ಧನ್ಯಳಾಗಿದ್ದೇನೆ. ಆಗ ನನಗೆ ಸಣ್ಣ ವಯಸ್ಸು; ಶ್ರೀಮಾತೆಯವರ ಮಹಿಮೆ ನನಗೆ ಆಗ ಸ್ವಲ್ಪವೂ ಅರ್ಥವಾಗಿರಲಿಲ್ಲ. ಕೇವಲ ಶ್ರೀಮಾತೆಯವರನ್ನು ಕಂಡರೆ, ಅವರ ಮಾತುಗಳನ್ನು ಕೇಳಿದರೆ ಜೀವ ತುಂಬಿಬರುತ್ತಿತ್ತು. ಶ್ರೀಮಾತೆಯವರ ಬಳಿಗೆ ಹೋದಾಗಲೆಲ್ಲ ನನಗೆ ಯಾವಾಗಲೂ ಭಕ್ಷೀಸು ಸಿಗುತ್ತಿತ್ತು- ಅವರು ಕೈತುಂಬ ಪ್ರಸಾದ ಕೊಡುತ್ತಿದ್ದರು. ಶ್ರೀಮಾತೆ ಆರೋಗ್ಯದಿಂದಿದ್ದ ದಿನಗಳವರೆಗೂ ಅವರು ತಮ್ಮ ಕೈಗಳಿಂದಲೇ ನನಗೆ ಪ್ರಸಾದ ಕೊಡುತ್ತಿದ್ದರು. ಸಂದೇಶ (ಸಿಹಿ ತಿಂಡಿ), ಹಣ್ಣುಗಳು, ಇನ್ನೂ ಏನೇನೋ! ನನ್ನ ಎರಡು ಪುಟ್ಟ ಕೈಗಳಲ್ಲಿ ಅದು ಹಿಡಿಸುತ್ತಿರಲಿಲ್ಲ. ಶ್ರೀಮಾತೆಯವರ ಮಹಿಮೆ ಅರ್ಥವಾಗಿರಲಿ, ಇಲ್ಲ

ದಿರಲಿ— ಆದರೆ ಅವರ ಪ್ರಸಾದ ಮಾತ್ರ ನನಗೆ ಅರ್ಥವಾಗಿತ್ತು! ಶ್ರೀಮಾತೆಯವರ ಬಳಿಗೆ ಹೋಗುವಾಗ ಹೀಗೆ ಕೈತುಂಬ ಸಿಗುವ ಪ್ರಸಾದದ ಆಸೆಯೂ ಇರುತ್ತಿತ್ತು.

ಶ್ರೀಮಾತೆ ನನ್ನ ಅತ್ತಿಗೆ ಹಾಗೂ ಇನ್ನಿತರರೊಂದಿಗೆ ಮಾತ ನಾಡುತ್ತಿದ್ದರು. ನಾನು ಅದನ್ನೆಲ್ಲ ಕೇಳಿಸಿಕೊಳ್ಳುತ್ತಿದ್ದೆ, ಆದರೆ ನನಗೆ ಅದೊಂದೂ ಅರ್ಥವಾಗುತ್ತಿರಲಿಲ್ಲ. ಆದರೆ ಆಗ ಅವರು ನನಗೇನು ಹೇಳುತ್ತಿದ್ದರೋ ಅದು ಸ್ವಲ್ಪಮಟ್ಟಿಗೆ ಈಗಲೂ ನೆನ ಪಿದೆ. ಈಗಲೂ ಅವರ ಅದೇ ಉಜ್ವಲವಾದ, ಪ್ರಸನ್ನವಾದ, ಕರುಣಾಪೂರ್ಣವಾದ ಮೂರ್ತಿ ನನ್ನ ಕಣ್ಣ ಮುಂದೆ ಬಂದು ನಿಲ್ಲುತ್ತದೆ.

ಶ್ರೀಮಾತೆಯವರ ಮಾತು ತುಂಬ ಮಧುರವಾಗಿರುತ್ತಿತ್ತು. ಆ ಜೇನಿನಂಥ ಮಾತುಗಳು ಈಗಲೂ ನನ್ನ ಕಿವಿಯಲ್ಲಿ ಅನು ರಣಿಸುತ್ತಿವೆ. ಶ್ರೀಮಾತೆ ಒಂದು ದಿನ ನನಗೆ ಹೇಳಿದ್ದರು: ''ಅಮ್ಮಾ, ಎಂದಿಗೂ ಸುಮ್ಮನೆ ಕುಳಿತುಕೊಳ್ಳಬೇಡ. ಒಂದಲ್ಲ ಒಂದು ಕೆಲಸ ಮಾಡುತ್ತಿರು. ಏನಾದರೂ ಒಂದು ಕೆಲಸ ಹುಡುಕಿ ಮಾಡುತ್ತಿರ ಬೇಕು, ಇಲ್ಲದಿದ್ದರೆ ಮನಸ್ಸಿಗೆ ಆಲಸ್ಯ ಹಿಡಿದು, ಏನಾದರೂ ಬೇಡದ ಆಲೋಚನೆಗಳು ತುಂಬಿಕೊಳ್ಳುತ್ತವೆ.'' ಒಬ್ಬಾಕೆ ವಯ ಸ್ಸಾದ ಮಹಿಳೆಗೆ ಒಂದು ದಿನ ಶ್ರೀಮಾತೆ ಹೇಳಿದರು: ''ನೀನು ಯಾವ ಮಾರ್ಗದಲ್ಲಿ ಹೋಗುತ್ತೀಯೋ, ಅಲ್ಲಿ ನೋಡು — ಆ ರಸ್ತೆಯಲ್ಲಿ ಯಾರಾದರೂ ಬಿದ್ದುಬಿಟ್ಟಿದ್ದರೆ, ನೀನು ಅವರನ್ನು ಮೇಲಕ್ಕೆತ್ತು. ದಾರಿಯಲ್ಲಿ ಬಿದ್ದುಬಿಟ್ಟಿದ್ದರೆ, ಯಾರನ್ನೂ ಅಲ್ಲೇ ಬಿಟ್ಟು ಹೋಗಬಾರದು.'' ಆಗ ನಾನು ಚಿಕ್ಕವಳು, ಶ್ರೀಮಾತೆ ಯವರ ಮಾತುಗಳ ಅರ್ಥ ನನಗಾಗಿರಲಿಲ್ಲ. ದಾರಿಯಲ್ಲಿ ಏನಾ ದರೂ ಸಿಕ್ಕಿದರೆ ಅದನ್ನು ಒಂದೆಡೆ ಸಂಗ್ರಹಿಸಿ ಇಡುತ್ತಿದ್ದೆ. ಆದರೆ ವಯಸ್ಸಾಗುತ್ತ ಬಂದಂತೆ ಜಗಜ್ಜನನಿ ಏನನ್ನು ಹೇಳ ಬಯಸಿ ದ್ದರೋ ಅದು ನನಗರ್ಥವಾಗತೊಡಗಿತು. ಅವರ ಜೀವನ ಚರಿತ್ರೆಯನ್ನು ಓದಿದಾಗ ನನಗರ್ಥವಾಯಿತು, ದಾರಿಯಲ್ಲಿ ಬಿದ್ದ ವಸ್ತುಗಳನ್ನು ಸಂಗ್ರಹಿಸಲು ಅವರು ಹೇಳಿದ್ದಲ್ಲ ; ನಮ್ಮ ನೆರೆಹೊರೆಯವರು ಆಗಿರಲಿ, ಪರಿಚಯವಿದ್ದವರೋ ಇಲ್ಲ ದವರೋ ಆಗಿರಲಿ, ಯಾರಾದರೂ ನಮ್ಮ ದಾರಿಮಧ್ಯೆ ಬಿದ್ದು ಬಿಟ್ಟಿದ್ದರೆ ಅವರನ್ನು ನಾವು ಕೈಹಿಡಿದು ಮೇಲೆತ್ತಬೇಕು, ಸರಿ ಯಾದ ಮಾರ್ಗದಲ್ಲಿ ಕರೆದುಕೊಂಡು ಹೋಗಬೇಕು ಎಂದು. ಕಾರಣ, ಎಲ್ಲರ ಮಾರ್ಗವೂ ಒಂದೆ — ಭಗವಂತನ ಕಡೆಗೆ. ನಾನು ಮಾತ್ರ ಈ ಮಾರ್ಗದಲ್ಲಿ ಒಬ್ಬಂಟಿ ನಡೆಯುತ್ತೇನೆ, ಇದರಿಂದ ಏನಾಗುವುದು? ನಾನು ಇತರರನ್ನು, ಯಾರು ದಾರಿ ತಪ್ಪಿರುವರೋ ಅವರನ್ನು ಕೂಡ ನನ್ನಿಂದ ಸಾಧ್ಯವಾದ ಮಟ್ಟಿಗೆ ಎಳೆದುತರಲು ಪ್ರಯತ್ನ ಮಾಡುತ್ತೇನೆ. ಈ ಆದರ್ಶವನ್ನು ಶ್ರೀಮಾತೆ ತಮ್ಮ ಜೀವನದ ಮೂಲಕ ತೋರಿಸಿಕೊಟ್ಟರು. ತಮ್ಮ ಮಾರ್ಗದ ಮಧ್ಯೆ ಬಿದ್ದದ್ದ ಎಷ್ಟೋ ಮಂದಿ ಪಾಪಿ, ದುಃಖಿತ ರನ್ನು, ಕಷ್ಟದಲ್ಲಿರುವ ಸ್ತ್ರೀಪುರುಷರನ್ನು ಅವರು ಎರಡೂ ಕೈಗ ಳಿಂದ ಮೇಲೆತ್ತಿ, ತಮ್ಮ ಮಡಿಲಲ್ಲಿ ಅವರಿಗೆ ಆಶ್ರಯ ನೀಡಿದರು. ಶ್ರೀಮಾತೆಯವರು ಮಾರ್ಗಮಧ್ಯೆ ಹೀಗೆ ಸಂಗ್ರಹಿಸಿದ ಗಂಡು-ಹೆಣ್ಣುಮಕ್ಕಳ ಗುಂಪು ನಿಜಕ್ಕೂ ಧನ್ಯ!

ಶ್ರೀಮಾತೆ ಅತ್ಯಂತ ಲಜ್ಜಾಶೀಲೆಯಾಗಿದ್ದರು. ಹುಡುಗರ ವಯಸ್ಸು ಹದಿನೈದು-ಹದಿನಾರು ಆಗಿದ್ದರೆ ಸಾಕು, ಶ್ರೀಮಾತೆ ಯವರ ಪಾಲಿಗೆ ಅವರು 'ಗಂಡಸು ವ್ಯಕ್ತಿ'ಯಾಗಿ ಬಿಡುತ್ತಿದ್ದರು. ಮುಖಪೂರ್ತಿ ಮುಚ್ಚಿಕೊಂಡು, ಅವರ ಮುಂದೆ ಶ್ರೀಮಾತೆ ಅವಗುಂಠನ ಹಾಕಿಕೊಳ್ಳುತ್ತಿದ್ದರು. ಅವರು ಹೇಳುತ್ತಿದ್ದರು: ಹೆಣ್ಣುಮಕ್ಕಳಿಗೆ ಲಜ್ಜೆಯೇ ಭೂಷಣ. ಲಜ್ಜೆ ಇಲ್ಲದ ಹೆಂಗಸರನ್ನು ಒಪ್ಪಲಾಗದು. ಒಂದು ದಿನ ಒಬ್ಬಾಕೆ ಎಳೆಯ ವಯಸ್ಸಿನ ಚೆಲುವೆ ಯಾದ ಮುತ್ತೈದೆಗೆ ಅವರು ಹೇಳುತ್ತಿದ್ದುದನ್ನು ಕೇಳಿಸಿಕೊಂಡೆ: ''ಯಾವಾಗಲೂ ಚೆನ್ನಾಗಿ ಮೈಮೇಲೆ ಬಟ್ಟೆ ಹೊದ್ದುಕೊಂಡು, ಅಥವಾ ಚಾದರ್(ಶಾಲು) ಹೊದ್ದುಕೊಂಡೇ ಹೊರಗಿಳಿ. ಹಾಗಿ ದ್ದರೆ ಮಾತ್ರ ನಿನಗೆ ನೆನಪಾಗುವುದು, ನಿನ್ನ ಜೊತೆಗೆ ಬೇರೆ ಯಾರೋ ಇದ್ದಾರೆ ಎಂದು.''

ಒಂದು ಸಲ ಅತ್ತಿಗೆ ಹಾಗೂ ಮಾವನ ಮನೆಯ ಇನ್ನೂ ಕೆಲವರೊಂದಿಗೆ ನಾನು 'ಶ್ರೀಮಾತೆಯವರ ಮನೆ'ಗೆ ಹೋದೆ. ಅಲ್ಲಿ ಮಧ್ಯಾಹ್ನ ಪ್ರಸಾದ (ಊಟ) ಪಡೆಯುವವರಿದ್ದೆವು. ಶ್ರೀಮಾತೆಯವರೊಂದಿಗೆ ಕುಳಿತು ನಾನು ಪ್ರಸಾದ ಪಡೆದೆ. ಆಗ ನೋಡಿದೆ, ಹೆಣ್ಣುಮಕ್ಕಳೊಂದಿಗೆ ಶ್ರೀಮಾತೆ ಒಂದು ಕೋಣೆ ಯಲ್ಲಿ ಪ್ರಸಾದ ತೆಗೆದುಕೊಳ್ಳುತ್ತಿದ್ದರು. ಎಲ್ಲರೂ ಹೊಟ್ಟೆ ತುಂಬಾ ಪ್ರಸಾದ ತಿಂದು, ಕೈ-ಬಾಯಿ ತೊಳೆದೂ ಆಗಿತ್ತು. ಅಷ್ಟರಲ್ಲಿ ಗಮನಿಸಿದೆ, ಶ್ರೀಮಾತೆ ಅವಸರವಾಗಿ ಒಬ್ಬರಿಗೆ ಹೇಳುತ್ತಿದ್ದರು, ನಮ್ಮ ಮನೆಗೆ ಒಂದು ಪಾತ್ರೆಯಲ್ಲಿ ಸ್ವಲ್ಪ ಪ್ರಸಾದ ತುಂಬಿ ಕೊಡುವುದಕ್ಕಾಗಿ. ಅವರು ಹೇಳಿದ ವ್ಯಕ್ತಿ ತುಸು ತಡ ಮಾಡು ತ್ತಿದ್ದರು. ಆಗ ಶ್ರೀಮಾತೆ ತಾವೇ ಎದ್ದುಹೋದರು — ಅದರ ಬಗ್ಗೆ ವಿಚಾರಿಸಲು. ಆಗ ಯೋಗಿನ್-ಮಾ ಹೇಳಿದರು, ''ಅಮ್ಮಾ, ನೀವೇ ಯಾಕೆ ಎದ್ದರಿ? ಅವಳು ಬಹುಶಃ ತಟ್ಟೆ , ಪಾತ್ರೆ ತೊಳೆದು ತರುತ್ತಿರಬೇಕು; ಅದಕ್ಕಾಗಿ ತಡವಾಗುತ್ತಿದೆ.'' ಬಳಿಕ ಸ್ವಲ್ಪ ನಗುತ್ತ, ''ನಿಮ್ಮ ತಂದೆಯ ಮನೆಯಿಂದ ಒಂದು ರಾಶಿ ಪಾತ್ರೆ ಕೊಟ್ಟಿದ್ದಾರೇನು? ನೀವು ಎಲ್ಲರಿಗೂ ಪಾತ್ರೆಯಲ್ಲಿ ಪ್ರಸಾದ ಕೊಡುತ್ತಿದ್ದಿರಲ್ಲಾ?'' ಎಂದರು. ಶ್ರೀಮಾತೆ ಮಧುರ ವಾಗಿ ನಗುತ್ತ, ''ಹೌದಲ್ಲ , ಅದರಿಂದ ಮಕ್ಕಳು ಒಂದಿಷ್ಟು ಪ್ರಸಾದ ತಿನ್ನಲಿ ಅಂತ!'' ಎಂದರು. ಯೋಗಿನ್-ಮಾ ನಗುತ್ತ, ''ನಮಗೆ ನೀವಾರು ಗೊತ್ತಿಲ್ಲವೆ? ಪ್ರಪಂಚದ ಎಲ್ಲರಿಗೂ ತಿನ್ನಿಸು ವುದು ಸಾಧ್ಯವೆಂದಾದರೆ ನೀವು ಎಲ್ಲರನ್ನೂ ಕೂರಿಸಿ, ಕೂರಿಸಿ ತಿನ್ನಿಸುವಿರಿ. ಸರಿ, ಈಗ ನೀವು ಕುಳಿತುಕೊಳ್ಳಿ. ನಾನೇ ಹೋಗಿ ನೋಡುತ್ತೇನೆ '' ಎಂದು ಹೇಳಿ, ಎದ್ದುಹೋದರು. ನಾವು ಪ್ರಸಾದ ಮನೆಗೆ ಕೊಂಡೊಯ್ದು, ಅಲ್ಲಿ ತಿನ್ನುವುದಕ್ಕಾಗಿ ತಂದು ಕೊಟ್ಟರು. ಶ್ರೀಮಾತೆಯವರ ಮುಖದಲ್ಲಿ ಅಗಾಧ ಸಂತೃಪ್ತಿಯ

ನಗು ಅರಳಿತು. ಈಗ ಅದನ್ನೆಲ್ಲ ನೆನಪಿಸಿಕೊಂಡಾಗ ನನಗನ್ನಿಸುತ್ತದೆ, ಶ್ರೀಮಾತೆ ಜಗದ್ಧಾತ್ರಿ; ಅವರು ಜಗತ್ತಿನ ಪಾಲನೆ ಮಾಡುವವರು; ಅವರು ಅನ್ನಪೂರ್ಣೆ — ಜಗತ್ತನ್ನೆಲ್ಲ ಪೋಷಿಸುವವರು. ಆದ್ದರಿಂದಲೇ ಅವರು ಎಲ್ಲರ ಬಗ್ಗೆ ಅಷ್ಟೊಂದು ಕಾಳಜಿ ವಹಿಸುತ್ತಿದ್ದರು.

ಶ್ರೀಮಾತೆಯವರು 'ರಾಮಕೃಷ್ಣಗತಪ್ರಾಣ'ರಾಗಿದ್ದರು. ಅವರಂತೆಯೇ ಮಾತು, ಅವರಂತೆಯೇ ಕೆಲಸ, ಹಾಗೂ ಅವರಂತೆಯೇ ಆಲೋಚನೆ — ಅವರೊಂದಿಗೆ ಒಂದಾಗಿ ಹೋಗಿದ್ದರು. ಶ್ರೀಮಾತೆ ನನ್ನ ಅತ್ತೆಗೆ ಹೇಳುತ್ತಿದ್ದರು: ''ಜೀವನದ ಪ್ರತಿಯೊಂದು ಹೆಜ್ಜೆಯಲ್ಲೂ ಶ್ರೀರಾಮಕೃಷ್ಣರ ಸ್ಮರಣೆ ಮಾಡು. ಹಾಗಿದ್ದರೆ ಯಾವ ಕಷ್ಟಬಂದರೂ ಅದು ಕಷ್ಟವೆನಿಸದು. ಜೀವನದಲ್ಲಿ ದುಃಖ, ಸಂಕಟ ಯಾರಿಗಿಲ್ಲ, ಹೇಳು? ಅದೆಲ್ಲ ಇದ್ದೇ ಇರುತ್ತವೆ. ಅವರ ನಾಮವನ್ನು ಹಿಡಿದುಕೊಂಡರೆ, ಅವರನ್ನು ಆಶ್ರಯಿಸಿದರೆ ಅವರು ಶಕ್ತಿ ನೀಡುತ್ತಾರೆ. ಆಗ ದುಃಖ, ಸಂಕಟಗಳು ನಿನ್ನ ಮೇಲೆ ಪರಿಣಾಮ ಬೀರಲಾರವು.''

ಬಾಗ್‌ಬಜಾರಿನ ('ಶ್ರೀಮಾತೆಯವರ ಮನೆ' ಅಥವಾ 'ಉದ್ಬೋಧನ') ಆ ಸಣ್ಣ ಮನೆಯಲ್ಲಿ ಶ್ರೀಮಾತೆ ವಿಶ್ವ-ಸಂಸಾರವನ್ನೇ ಹೊತ್ತುಕೊಂಡು ವಾಸವಾಗಿದ್ದರೇನೋ ಎಂಬಂತಿತ್ತು. ಅಷ್ಟೊಂದು ಮಂದಿ ಅಲ್ಲಿಗೆ ಬಂದು ಹೋಗುತ್ತಿದ್ದರು; ಅದರ ನಡುವೆ ಎಲ್ಲ ಕೆಲಸಗಳೂ ಅಚ್ಚುಕಟ್ಟಾಗಿ ನಡೆದುಕೊಂಡು ಹೋಗುತ್ತಿದ್ದವು. ಸಾಯಂಕಾಲವಾಯಿತೆಂದರೆ ಯೋಗಿನ್-ಮಾ ಅಥವಾ ಗೋಲಾಪ್-ಮಾ ಶ್ರೀಮಾತೆಯವರ ಕೂದಲನ್ನು ಬಾಚಿಕೊಡುತ್ತಿದ್ದರು. ಶ್ರೀಮಾತೆಯವರ ಕೂದಲು ದಟ್ಟವಾಗಿ, ಕಡುಗಪ್ಪು ಬಣ್ಣದಿಂದಕೂಡಿತ್ತು; ಆ ಕೂದಲು ಎಷ್ಟು ಸುಂದರವಾಗಿತ್ತು! ಶ್ರೀಮಾತೆ ಎಷ್ಟು ಗಭೀರವಾಗಿರುತ್ತಿದ್ದರೋ, ಅದೇರೀತಿ ಅವರ ತಲೆಗೂದಲು ಕೂಡ ಗಭೀರವಾಗಿತ್ತು. ಅದನ್ನು ನೋಡುವಾಗ ಆಕಾಶದಲ್ಲಿ ಕಾರ್ಮುಗಿಲು ಹೆಪ್ಪುಗಟ್ಟಿದಂತೆ ಅನ್ನಿಸುತ್ತಿತ್ತು. ಆದರೆ ಕೊನೆಯ ದಿನಗಳಲ್ಲಿ ಶ್ರೀಮಾತೆಯವರ ತಲೆಗೂದಲು ಕಡಿಮೆಯಾಗಿತ್ತು.

ಶ್ರೀಮಾತೆಯವರ ಪಾದಗಳು ಅತ್ಯಂತ ಸುಂದರವಾಗಿದ್ದವು. ಅವರ ಪಾದಗಳ ಕೆಳಭಾಗ ತಾವರೆ ಹೂವಿನಂತೆ ಕೆಂಪುಬಣ್ಣದ ಹೊಳಪಿನಿಂದ ಕೂಡಿದ್ದವು. ಪಾದಗಳ ಆಕಾರ ಕೂಡ ಅತ್ಯಂತ ಸುಂದರವಾಗಿತ್ತು. ಅವರ ಮುಖದ ಆಕಾರ ತುಂಬ ಮಧುರತರವಾಗಿತ್ತು; ಕಣ್ಣು , ಮೂಗು ಇವೆಲ್ಲ ಅತ್ಯಪೂರ್ವವಾಗಿದ್ದವು. ಅವರ ಮುಖ, ಕಣ್ಣುಗಳು ಕರುಣೆ ಹಾಗೂ ಮಮತೆಯ ಲೇಪದಿಂದ ಕೂಡಿದ್ದವು.

ಒಂದುಬಾರಿ ಶ್ರೀಮಾತೆಯವರ ಸೊಸೆ ರಾಧುವಿನ ಕಣ್ಣಿನಲ್ಲಿ ಏನೋ ಬಿದ್ದಿತ್ತು. ಅವಳು ಶ್ರೀಮಾತೆಯವರ ಬಳಿಗೆ ಓಡೋಡಿ ಬಂದು, ಅವರ ಮಡಿಲಲ್ಲಿ ಮುಖವನ್ನಿಟ್ಟು ಮಲಗಿ ಹೇಳಿದಳು, ''ನನ್ನ ಕಣ್ಣಿನಲ್ಲಿ ಏನೋ ಬಿದ್ದಿದೆ, ಉರಿಯುತ್ತಿದೆ. ನಿಮ್ಮ ಕೈಯಿಂದ ನನ್ನ ಕಣ್ಣಿನ ಮೇಲೆ ಸ್ವಲ್ಪ ಸವರಿ ಕೊಡಿ. ಆದರೆ ಮಾತ್ರ ನನ್ನ ಕಣ್ಣು ಸರಿ ಹೋದೀತು.'' ಶ್ರೀಮಾತೆ ನಗುತ್ತ ರಾಧುವಿನ ತಲೆಯನ್ನು ತಮ್ಮ ಮಡಿಲಿನತ್ತ ಇನ್ನಷ್ಟು ಭದ್ರವಾಗಿ ಎಳೆದುಕೊಂಡು, ಅವಳ ಕಣ್ಣುಗಳ ಮೇಲೆ ಕೈಯನ್ನು ಸವರಿಕೊಟ್ಟರು. ಆಶ್ಚರ್ಯ! ರಾಧು ಹೇಳಿದಳು, ''ನನ್ನ ಕಣ್ಣು ಸರಿಹೋಯಿತು. ಈಗ ಕಣ್ಣಿನಲ್ಲಿ ಏನೂ ಇಲ್ಲ.''

ಸಣ್ಣವಯಸ್ಸಿನ ವಿಧವೆ ಹೆಣ್ಣುಮಕ್ಕಳು ಏಕಾದಶಿಯಂದು ನಿರ್ಜಲ ಉಪವಾಸ ಮಾಡುವುದು, ಅಥವಾ ಸಾಮಾನ್ಯ ಉಪವಾಸ ಮಾಡುವುದು ಇವನ್ನು ಶ್ರೀಮಾತೆಗೆ ಸಹಿಸಲಾಗುತ್ತಿರಲಿಲ್ಲ. ಆ ವಿಧವೆಯರು ತಮ್ಮ ತಲೆಗೂದಲನ್ನು ಸಣ್ಣದಾಗಿ ಕತ್ತರಿಸುತ್ತಿದ್ದುದೂ ಅವರಿಗೆ ಹಿಡಿಸುತ್ತಿರಲಿಲ್ಲ. ವಯಸ್ಸಾದ ವಿಧವೆಯರಾದರೂ, ಏಕಾದಶಿ ದಿನದಂದು ನಿರ್ಜಲ ಉಪವಾಸ ಮಾಡುವುದನ್ನು ಶ್ರೀಮಾತೆ ಇಷ್ಟಪಡುತ್ತಿರಲಿಲ್ಲ.

ಶ್ರೀಮಾತೆಯವರ ಅನಂತ ಲೀಲೆಯನ್ನು ನಾನು ಎಷ್ಟು ಮಾತ್ರ ತಿಳಿದೇನು! ಎಷ್ಟನ್ನು ನಾನು ನೋಡಿರುವೆನೋ, ಅದನ್ನಾದರೂ ಸರಿಯಾಗಿ ಬರೆಯುವುದು ನನ್ನಂಥ ಸಾಮಾನ್ಯ ವ್ಯಕ್ತಿಗೆ ಸಾಧ್ಯವಾಗುವ ಕೆಲಸವಲ್ಲ. ಹಾಗಿದ್ದರೂ, ನನ್ನ ಸಣ್ಣ ವಯಸಿನಲ್ಲಿ ನಾನು ಕಣ್ಣಿನಿಂದಲೇ ಏನನ್ನು ನೋಡಿದ್ದೇನೋ, ಏನೇನು ಸಂಗತಿಗಳನ್ನು ಕೇಳಿದ್ದೇನೋ ಅವುಗಳಲ್ಲಿ ಕೆಲವನ್ನು ಮಾತ್ರ ನನಗೆ ನೆನಪು ಮಾಡಿಕೊಳ್ಳಲು ಸಾಧ್ಯವಾಗಿದೆ. ಹಾಗೆ ಕಂಡ, ಕೇಳಿದ ಕೆಲವು ಕ್ಷಣಗಳನ್ನು ಶ್ರೀಮಾತೆಯವರ ಕೃಪೆಯಿಂದ ಎಲ್ಲರ ಬಳಿಗೆ ತಲುಪಿಸುವ ಇಚ್ಛೆಯಾದುದರಿಂದಲೇ ನಾನು ಇದನ್ನು ಬರೆಯುವಂತಾಯಿತು.*

** 'ಉದ್ಬೋಧನ', ೬೪ನೇ ವರ್ಷ, ಸಂಖ್ಯೆ ೧೨, ೧೩೬೯ (ಬಂಗಾಳಿ ವರ್ಷ), ಪೌಷ.*

*ಅನುವಾದ: ಸ್ವಾಮಿ ಜ್ಞಾನಯೋಗಾನಂದ*

ಒಂದು ದಿನ ಶ್ರೀರಾಮಕೃಷ್ಣರ ಬಗ್ಗೆ ಏನಾದರೂ ಕೇಳಿಸಿಕೊಳ್ಳುವ ಆಸೆಯಿಂದ ಸ್ವಾಮಿ ಬ್ರಹ್ಮಾನಂದರನ್ನು ಪ್ರಾರ್ಥಿಸಿಕೊಂಡೆವು: ''ಮಹಾರಾಜ್, ಶ್ರೀರಾಮಕೃಷ್ಣರ ಬಗ್ಗೆ ನಮಗೆ ಏನಾದರೂ ಸ್ವಲ್ಪ ಹೇಳಿ.'' ಇದನ್ನು ಕೇಳಿಸಿಕೊಂಡ ಅವರು ಮಾತನಾಡದೆ ಸುಮ್ಮನಿದ್ದುಬಿಟ್ಟರು. ಬಳಿಕ ''ಅವರು ಅರ್ಥ ಮಾಡಿಕೊಳ್ಳುವುದರ ವ್ಯಾಪ್ತಿಯ ಹೊರಗೆ'' ಎಂದು ಹೇಳುತ್ತಲೇ ಅಂತರ್ಮುಖಿಗಳಾದರು. ಸ್ವಲ್ಪ ಹೊತ್ತಿನ ನಂತರ, ''ನಾನು ನಿಮಗಾಗಿ ಪ್ರಾರ್ಥನೆ ಮಾಡುತ್ತೇನೆ, ನೀವೂ ಕೂಡ ಅವರಲ್ಲಿ ಮನಃಪೂರ್ವಕ ಪ್ರಾರ್ಥಿಸಿ, ಅವರೇ ನಿಮಗೆ ಎಲ್ಲವನ್ನೂ ತಿಳಿಸಿಕೊಡುತ್ತಾರೆ'' ಎಂದರು.

*('ಅಂತರ್ಮುಖಿ' ಗ್ರಂಥದಿಂದ)*